**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.**

**ಸಿ.ಸಿ ನಂಬರ್ಃ 899/2022**

ಪಿರ್ಯಾದಿ : ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿತರು : **1.** ಬಿ.ಎಸ್.ಇಂದ್ರೇಶ್ ಬಿನ್ ಲೇಟ್ ಸುಬ್ಬೇಗೌಡ,
ವಯಸ್ಸು ಸುಮಾರು 54 ವರ್ಷ.

**2.** ಬಿ.ಬಿ.ಅಶೋಕ್ ಬಿನ್ ಲೇಟ್ ಬೈರೇಗೌಡ,
ವಯಸ್ಸು ಸುಮಾರು 59 ವರ್ಷ.

**3.** ಅಶ್ವಿನ್ ಬಿ.ಎ. ಬಿನ್ ಅಶೋಕ ಬಿ.ಬಿ.
ವಯಸ್ಸು ಸುಮಾರು 24 ವರ್ಷ.

**4.** ರಜೀತ್ ಬಿ.ಕೆ. ಬಿನ್ ಬಿ.ಎಂ ಕೃಷ್ಣೇಗೌಡ ,
ವಯಸ್ಸು ಸುಮಾರು 28 ವರ್ಷ.

ಆರೋಪಿತರೆಲ್ಲರೂ ವಾಸ: ಬಕ್ಕಿ ಗ್ರಾಮ,
ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು.

* * * * *

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ಹೇಳಿಕೆ

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 2) ಫ್ರಾಸಾ-1 ವಿ.ಎನ್. ಲತಾಮಣಿ ರವರು ತಮ್ಮ ಸಾಕ್ಷ್ಯದಲ್ಲಿ ಬಕ್ಕಿ ಗ್ರಾಮದ ಸ.ನಂ.40 ರಲ್ಲಿ 6 ಎಕರೆ 23 ಗುಂಟೆ ಜಮೀನು ಅವರ ಗಂಡನ ಹೆಸರಿನಲ್ಲಿ ಇದೆ, ದಿ.17.01.2022 ರಂದು ಬೆ.9.00 ಗಂಟೆಗೆ ಅವರು ಆ ಜಮೀನಿಗೆ ಕಾಫೀ ಬೆಳೆ ಹಾರಿಸಲು ಹೋಗಿರುವುದಾಗಿ ಮತ್ತು ಅವರ ಜಮೀನಿಗೆ ಮರ ಮತ್ತು ಕಲ್ಲುಕಂಬದ ಬೇಲಿಯನ್ನು ಹಾಕಿರುವುದಾಗಿ ಹಾಗೂ ಆ ಬೇಲಿಯನ್ನು ಆರೋಪಿತರಾದ ನೀವುಗಳು ಕೀಳಲು

ಪ್ರಯತ್ನಿಸುತ್ತಿದ್ದಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 3) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಆರೋಪಿತರಾದ ನಿಮ್ಮನ್ನು ಪ್ರಶ್ನಿಸಿದ್ದಕ್ಕೆ 1 ನೇ ಆರೋಪಿಯಾದ ನೀವು ಅವರನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿ, ಕೆಟ್ಟ ಶಬ್ದಗಳಿಂದ ಬೈದು, ಕೈಯಲ್ಲಿದ ಕತ್ತಿಯಿಂದ ಅವರಿಗೆ ಹೊಡೆಯಲು ಬಂದಾಗ ಅವರು ಅವರ ಎಡಗೈ ಅಡ್ಡಕೊಟ್ಟಿದ್ದು ಮೊಣಕೈಗೆ ರಕ್ತಗಾಯವಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 4) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅಲ್ಲೇ ಇದ್ದ 2 ರಿಂದ 4 ನೇ ಆರೋಪಿತರಾದ ನೀವುಗಳು ಅವರಿಗೆ ಕೆಟ್ಟ ಶಬ್ದಗಳಿಂದ ಬೈದು, ಬೆನ್ನಿಗೆ ಗುದ್ದಿ ಜಡೆಯನ್ನು ಎಳೆದಾಡಿದರು, 2 ನೇ ಆರೋಪಿ ಅವರು ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

2 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 5) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ 1 ನೇ ಆರೋಪಿಯಾದ ನೀವು ಮುಂದುವರೆದು ನಿಮ್ಮ ಬಳಿ ಕೋವಿ ಇದ್ದು, ಒಂದಲ್ಲ ಒಂದು ದಿನ ಅವರನ್ನು ಸಾಯಿಸುತ್ತೇನೆ ಎಂದು ಅವರಿಗೆ ಪ್ರಾಣ ಬೆದರಿಕೆ ಹಾಕಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 6) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಅಲ್ಲಿಂದ ಮನೆಗೆ ಬಂದು ಚಾಸಾ-2 ರವರಿಗೆ ಕರೆ ಮಾಡಿದೆ ಆಗ ಅವರು ಅವರನ್ನು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 7) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇದಿನ ಬಣಕಲ್ ಪೋಲಿಸರು ಆಸ್ಪತ್ರೆಗೆ ಬಂದು ಅವರ ಹೇಳಿಕೆ ಪಡೆದು, ದಿ.29.01.2022 ರಂದು ಪೋಲಿಸರು ಗಲಾಟೆಯಾದ ಜಾಗಕ್ಕೆ ಬಂದು ಮಹಜರ್ ಮಾಡಿ, ಬಟ್ಟೆ ಮತ್ತು ಕತ್ತಿಯನ್ನು ಪಡೆದು, ದಿ.10.02.2022 ರಂದು ಅವರು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 8) ಫ್ರಾಸಾ-2 ಸುಂದರೇಶ್ ವಿ.ಎನ್. ರವರು ತಮ್ಮ ಸಾಕ್ಷ್ಯದಲ್ಲಿ ದಿ.17.01.2022 ರಂದು ಚಿಕ್ಕಮಗಳೂರು ತಾಲ್ಲೂಕಿನ ವಾಜುವಳ್ಳಿಯಲ್ಲಿ ಅವರ ಮನೆಯಲ್ಲಿರುವಾಗ ಬೆಳಗ್ಗೆ ಚಾಸಾ-1 ರವರು ಅವರಿಗೆ ದೂರವಾಣಿ ಕರೆಯನ್ನು ಮಾಡಿ, ಅವರಿಗೆ ಸೇರಿದ ಸ.ನಂ.40 ರ 6 ಎಕರೆ 23 ಗುಂಟೆ ಜಮೀನಿನಲ್ಲಿ ಚಾಸಾ-1 ರವರು ಕಾಫೀಯನ್ನು ಹೆರಕಲು ಮಾಡಲು ಹೋದ ಸಮಯದಲ್ಲಿ ಆರೋಪಿತರಾದ ನೀವುಗಳು ಸದರಿ ಜಮೀನಿಗೆ ಹಾಕಲಾದ ತಂತಿ ಬೇಲಿಯನ್ನು ಕೀಳುತ್ತಿರುವುದು ಕಂಡು ಬರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 9) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-1 ರವರು ಅವರ ತೋಟದ ಬೇಲಿಯನ್ನು ಏಕೆ ಕೀಳುತ್ತಿದ್ದೀರಿ ಎಂದು ಆರೋಪಿತರಾದ ನಿಮ್ಮಗಳನ್ನು ಕೇಳಿದಾಗ, ಆರೋಪಿತರುಗಳಲ್ಲಿ ಒಬ್ಬರಾದ 1 ನೇ ಆರೋಪಿಯಾದ ನೀವು ಕತ್ತಿಯಿಂದ ಚಾಸಾ-1 ರವರ ಎಡಗೈ ಗೆ ಹೊಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 10) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ 2 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ನಿಮ್ಮ ಕೈನಿಂದ ತಳ್ಳಿರುತ್ತೀರಿ ಮತ್ತು ತಲೆಕೂದಲನ್ನು ಹಿಡಿದು ಎಳೆದಾಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

2 ನೇ ಆರೋಪಿತರ ಉತ್ತರಃ

ಪ್ರಶ್ನೆಃ 11) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ 3 ಮತ್ತು 4 ನೇ ಆರೋಪಿತರಾದ ನೀವುಗಳು ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೈ ನಿಂದ ಚಾಸಾ-1 ರವರಿಗೆ ಥಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

3 ಮತ್ತು 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 12) ಫ್ರಾಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ನಂತರ 1 ನೇ ಆರೋಪಿಯಾದ ನೀವು ಬಂದೂಕನ್ನು ತೋರಿಸಿ ನನ್ನ ಬಳಿ ಪರವಾನಿಗೆ ಇದೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ, ನಿನ್ನ ಫ್ರಾಣ ತೆಗೆಯುತ್ತೇನೆ ಎಂದು ಜೀವ ಬೆದರಿಕೆಯನ್ನು ಹಾಕಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 13) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-1 ರವರ ಅವರಿಗೆ ದೂರವಾಣಿ ಕರೆ ಮಾಡಿ ತಿಳಿಸಿದ ಕಾರಣ 10.30 ರ ಸಮಯಕ್ಕೆ ಚಾಸಾ-1 ರವರ ಮನೆಗೆ ಬಂದು ನೋಡಲಾಗಿ ಚಾಸಾ-1 ರವರ ಕೈನಿಂದ ರಕ್ತ ಸ್ರಾವವಾಗುತ್ತಿರುತ್ತದೆ ಅವರು ನೈಟಿ ಹರಿದಿರುತ್ತದೆ ನಂತರ ಅಲ್ಲಿಂದ ಚಿಕ್ಕಮಗಳೂರಿನ ಮಲ್ಲೆಗೌಡ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 14) ಫ್ರಾಸಾ-3 ಸುಮಂತ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.29.01.2022 ರಂದು ಅವರು ಕಾಫೀ ತೋಟದಲ್ಲಿ ಕೆಲಸ ಮಾಡುತ್ತಿರುವ ಸಮಯದಲ್ಲಿ ಬಣಕಲ್ ಠಾಣೆಯ ಪೋಲಿಸರು ಅವರನ್ನು ಸ್ಥಳ ಮಹಜರ್ ಗೆಂದು ಕರೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 15) ಫ್ರಾಸಾ-4 ಸಂತೋಷ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.29.01.2022 ರಂದು ಅವರು ಕಾಫೀ ತೋಟದಲ್ಲಿ ಕೆಲಸ ಮಾಡುತ್ತಿರುವ ಸಮಯದಲ್ಲಿ ಬಣಕಲ್ ಠಾಣೆಯ

ಪೋಲಿಸರು ಬಕ್ಕಿ ಗ್ರಾಮದ ಸ.ನಂ.40 ರ ಸ್ಥಳ ಮಹಜರ್ ಗೆಂದು ಕರೆದಿದ್ದು ಸದರಿ ಮಹಜರ್ ಗೆ ಹಾಜರಾಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 16) ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-1 ರವರು ಕತ್ತಿ, ಒಂದು ನೈಟಿ, ಒಂದು ಶರ್ಟ್, ಒಂದು ತಲೆ ಬಟ್ಟೆಯನ್ನು ಹಾಜರು ಮಾಡಿದ ಮೇರೆಗೆ ಅದನ್ನು ಪೋಲಿಸರು ಅಮಾನತುಪಡಿಸಿಕೊಂಡು, ಫೋಟೊ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 17) ಫ್ರಾಸಾ-5 ಲಕ್ಷ್ಮಣಗೌಡ ಸಿ.ಹೆಚ್. ರವರು ತಮ್ಮ ಸಾಕ್ಷ್ಯದಲ್ಲಿ ದಿ.17.01.2022 ರಂದು ಚಾಸಾ-1 ರವರ ಹೇಳಿಕೆಯನ್ನು ಎಂ.ಜಿ.ಎಮ್. ಚಿಕ್ಕಮಗಳೂರಿನಲ್ಲಿ ಪಡೆದುಕೊಂಡು, ನಂತರ ಠಾಣೆಗೆ ಹಿಂತಿರುಗಿ, ಠಾ.ಮೊ.ನಂ.4/2022 ರ ಕಲಂ 447, 504, 324, 323, 427, 354(ಬಿ), 506 ಸಹವಾಚಕ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 18) ಫ್ರಾಸಾ-6 ಗಾಯಿತ್ರಿ ರವರು ತಮ್ಮ ಸಾಕ್ಷ್ಯದಲ್ಲಿ ದಿ.24.01.2022 ರಂದು ಪ್ರಸ್ತುತ ಪ್ರಕರಣದ ಕಡತವನ್ನು ಚಾಸಾ-9 ರವರಿಂದ ಪಡೆದುಕೊಂಡು ಅದೇ ದಿನ ಆರೋಪಿತರಾದ ನಿಮ್ಮಗಳನ್ನು ಜಾಮೀನಿನ ಮೇಲೆ ಬಿಡಬಾರದು ಎಂದು ನ್ಯಾಯಾಲಯಕ್ಕೆ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 19) ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.28.01.2022 ರಂದು ಕೃತ್ಯ ನಡೆದ ಸ್ಥಳವಾದ ಬಣಕಲ್ ಹೋಬಳಿ, ಬಕ್ಕೀ ಗ್ರಾಮದಲ್ಲಿರುವ ಸ.ನಂ.40 ರ ದಾಖಲಾತಿ ಹಾಗೂ ಇದರ ವಾರಸುದಾರರು ಯಾರು ಎಂಬುದರ ದಾಖಲಾತಿಯನ್ನು

ಕೋರಿ ಚಾಸಾ-6 ರವರಿಗೆ ಮನವಿ ಪತ್ರವನ್ನು ಸಲ್ಲಿಸಿ, ದಿ.29.01.2022 ರಂದು ಕೃತ್ಯ ನಡೆದ ಸ್ಥಳದ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ-1 ರವರು ಹಾಜರುಪಡಿಸಿದಂತಹ ಮುದ್ದೆ ಮಾಲುಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆ: 20) ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದರಲ್ಲಿ 2 ಅಡಿ ಉದ್ದ ಇರುವ ಮರದ ಹಿಡಿ ಇರುವ 1 ಕಬ್ಬಿಣದ ಕತ್ತಿ, ಗುಲಾಬಿ ಬಣ್ಣದ ಚಿತ್ರವಿರುವ, ನೇರಳೆ ಬಣ್ಣದ ಒಂದು ನೈಟಿ ಅದು ಎದೆಯ ಭಾಗದಲ್ಲಿ ಮತ್ತು ಹೊಟ್ಟೆಯ ಭಾಗದಲ್ಲಿ ಹರಿದಿರುತ್ತದೆ, ನೀಲಿ ಬಣ್ಣದ ಬಿಳಿ ಚುಕ್ಕಿ ಇರುವ ಒಂದು ಅಂಗಿ, ಸದರಿ ಅಂಗಿಯಲಿ ಅಲ್ಲಲ್ಲಿ ರಕ್ತಸಿಕ್ತದ ಗುರುತು ಮತ್ತು ಎಡತೋಳಿನ ಭಾಗದಲ್ಲಿ ಸ್ವಲ್ಪ ಹರಿದಿರುತ್ತದೆ, ಹಸಿರು ಬಣ್ಣದ ಬಿಳಿ ವೃತ್ತ ಹಾಗು ಚುಕ್ಕಿಗಳಿರುವ, ರಕ್ತಸಿಕ್ತವಾಗಿರುವ ಒಂದು ಬಟ್ಟೆ ಇರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆ: 21) ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಮಹಜರ್ ಕ್ರಮ ಜರುಗಿಸಿ, ಫೋಟೋವನ್ನು ತೆಗೆಯಲಾಗಿರುತ್ತದೆ, ದಿ.10.02.2022 ರಂದು ಚಾಸಾ-1 ರವರ ಕಲಂ 164 ರಡಿಯಲ್ಲಿ ಅವರ ಹೇಳಿಕೆಯನ್ನು ದಾಖಲಿಸಿಕೊಡುವಂತೆ ನ್ಯಾಯಾಲಯಕ್ಕೆ ಮನವಿಯನ್ನು ನೀಡಿರುತ್ತೇವೆ. ದಿ.11.02.2022 ರಂದು ಚಾಸಾ-1 ರವರ ಕಲಂ 164 ರಡಿಯ ಹೇಳಿಕೆಯನ್ನು ನ್ಯಾಯಾಲಯದಿಂದ ಪಡೆದು, ಪ್ರಕರಣದ ಕಡತಕ್ಕೆ ಅಳವಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆ: 22) ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ31.03.2022 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನೀಡಲು ಚಾಸಾ-8 ರವರಿಗೆ ಮನವಿ ಪತ್ರವನ್ನು ನೀಡಿರುತ್ತೇನೆ, ದಿ.01.05.2022 ರಂದು ಕೃತ್ಯ ನಡೆದ ಸ್ಥಳದ ಬಗ್ಗೆ ಚಾಸಾ-6

ರವರು ನೀಡಿದ ವರದಿಯನ್ನು ಮತ್ತು ಪಹಣಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 23) ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.08.06.2022 ರಂದು ಗ್ರಾಯದ ದೃಢೀಕರಣ ಪತ್ರವನ್ನು ಚಾಸಾ-8 ರವರಿಂದ ಪಡೆದುಕೊಂಡು, ದಿ.20.06.2022 ರಂದು ಚಾಸಾ-10 ರವರಿಂದ ಕಲಂ65 ಬಿ ರಡಿಯ ದೃಢೀಕೃತ ಪ್ರತಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 24) ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.20.08.2022 ರಂದು ಚಾಸಾ-1 ರವರ ಹೇಳಿಕೆ, ದಿ.08.06.2022 ರಂದು ಚಾಸಾ-2 ಮತ್ತು 3 ರವರ ಹೇಳಿಕೆಯನ್ನು ಪಡೆದುಕೊಂಡು, ನಂತರ ಆರೋಪಿತರಾದ ನಿಮ್ಮ ವಿರುದ್ಧ ಆರೋಪವು ಸಾಬೀತಾದ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 25) ಫ್ರಾಸಾ-7 ಮಹೇಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.17.01.2022 ರಂದು ಚಾಸಾ-1 ರವರು ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ಅವರು ಅವರನ್ನು ಪರೀಕ್ಷೆಗೆ ಒಳಪಡಿಸಲಾಗಿ ಚಾಸಾ-1 ರವರ ಎಡಗೈ ನ ಮಣಿಕಟ್ಟಿನಲ್ಲಿ ಕತ್ತರಿಸಿದ ರೀತಿಯಲ್ಲಿ ಒಂದು ಗಾಯವಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 26) ಫ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿಯವರಿಗೆ ಅವರು ಚಿಕಿತ್ಸೆಯನ್ನು ನೀಡಿದ್ದು, ನಂತರ ದಿ.31.03.2022 ರಂದು ಪೋಲಿಸರು ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿದ ಮನವಿಯ ಮೇರೆಗೆ ಅವರು ಚಾಸಾ-1 ರವರಿಗೆ

ಸಂಬಂಧಿಸಿದ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 27) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ?

1 ರಿಂದ 4 ನೇ ಆರೋಪಿತರ ಉತ್ತರಃ

ಪ್ರಶ್ನೆಃ 28) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

1 ರಿಂದ 4 ನೇ ಆರೋಪಿತರ ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-

ಮೂಡಿಗೆರೆ<br>ದಿನಾಂಕಃ 30.01.2026.

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್ ಸಿ<br>ನ್ಯಾಯಾಲಯ, ಮೂಡಿಗೆರೆ.